
# ಕೃಷಿ ವಿಶ್ವವಿದ್ಯಾಲಯ
# ಧಾರವಾಡ

ಭಾಕೃಅನುಪ
ICAR

# ಹಿತ್ತಲಲ್ಲಿ ಕೋಳಿ ಸಾಕಿ ಶ್ರಮವಿಲ್ಲದೆ ಹಣ ಗಳಿಸಿ



## ಕೃಷಿ ವಿಜ್ಞಾನ ಕೇಂದ್ರ
## ಹನುಮನಮಟ್ಟಿ

# ಹಿತ್ತಲಲ್ಲಿ ಕೋಳಿ ಸಾಕಿ ಶ್ರಮವಿಲ್ಲದೆ ಹಣ ಗಳಿಸಿ

ಕೃಷಿಯು ನಾಡಿನ ಗ್ರಾಮೀಣ ಜನತೆಯ ಮುಖ್ಯ ಜೀ ಮಾರ್ಗವಾಗಿರುವಂತೆಯೇ, ಕೃಷಿ ಪೂರಕ ಚಟುವಟಿಕೆಯಾದ ಕು ಪಾಲನೆಯು ದೇಶದ ಆಹಾರೋತ್ಪಾದನೆ ಸಾಮರ್ಥ್ಯವನ್ನು ದೃಷ್ಟಿಯಿ ಅತೀ ಮುಖ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಕೋಳಿ ಸಾಕಾಣಿಕೆ ಒಂದು ಪ್ರಮುಖ ಉದ್ದಿಮೆಯಾಗಿ ಬೆಳೆಯುತ್ತಿದ್ದರೂ ಸಹ, ದೇಶ



ಮಾಂಸ ಮತ್ತು ಮೊಟ್ಟೆ ಲಭ್ಯತೆ ಸಾಕಷ್ಟು ಕೊರತೆಯಿದ್ದು, ಅ ಸುಧಾರಣೆಯಾಗಬೇಕಾಗಿದೆ. ಈ ನಿಟ್ಟಿನಲ್ಲಿ ಹಳ್ಳಿಗಾಡುಗಳಲ್ಲಿ ನೆಲೆಸಿ ಗ್ರಾಮೀಣ ರೈತರ ಅಭಿವೃದ್ಧಿಗಾಗಿ ಹಾಗೂ ಪಶು ವೈದ್ಯಕೀ ವಿಶ್ವವಿದ್ಯಾನಿಲಯಗಳು ಶ್ರಮಿಸು

ಕುಕ್ಕಟ ಪಾಲನೆಯಲ್ಲಿ ಗ್ರಾಮೀಣ ಜನತೆಗೆ, ಬಡತನ ರೇಖೆಗ ಕೆಳಗಿರುವ ರೈತರ ಬದುಕು ಹಸನಾಗಲೆಂಬ ಸದುದ್ದೇಶದಿಂದ "ಗಿರಿರಾ ಎಂಬ ಕೋಳಿ ತಳಿಗಳನ್ನು ಪರಿಚಯಿಸಿರುತ್ತಾರೆ. ಇದು ಒಂದು ಉತ್ತ ಮಾಂಸ ಉತ್ಪಾದನೆಯ ತಳಿಯಾಗಿದ್ದು, ಗ್ರಾಮೀಣ ಮಹಿಳೆ ಅಚ್ಚುಮೆಚ್ಚಿನ ಪ್ರಬೇಧವಾಗಿದೆ. ಈ ತಳಿಯು ಕರ್ನಾಟಕ ಹಾಗೂ ಭಾ ದೇಶದಲ್ಲಲ್ಲದೆ, ವಿದೇಶಗಳಾದ ಶ್ರೀಲಂಕಾ ಮತ್ತು ನೇಪಾಳಗಳಲ್ಲೂ ಹ ಪ್ರಚಲಿತವಾಗಿದೆ. ಇದೀಗ "ಸ್ವರ್ಣಧಾರ" ಎಂಬ ಕೋಳಿ ತಳಿಯ ಬೆಂಗಳೂರಿನ ಪಶು ವೈದ್ಯಕೀಯ ಕಾಲೇಜಿನ ವಿಜ್ಞಾನಿಗ ಬಿಡುಗಡೆಗೊಳಿಸಿದ್ದಾರೆ. ಇದನ್ನು ಗ್ರಾಮೀಣ ಜನತೆಯು ಹೆಚ್ಚು ಮೊ ಉತ್ಪಾದಿಸುವ ಕೋಳಿ ತಳಿಯನ್ನು ಇಷ್ಟಪಡುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಈ ಕೋಳಿ ತಳಿಯನ್ನು ಅಭಿವೃದ್ಧಿಪಡಿಸಿರುತ್ತಾರೆ. ಈ ತಳಿಯು ಗಿರಿರಾಜ ಕೋಳಿಗಿಂತ ಹೆಚ್ಚು ಮೊಟ್ಟೆ ಉತ್ಪಾದನೆಯನ್ನು ಮಾಡುತ್ತದೆ. ಈ ತಳಿಗಳು



ಜವಾರಿ ಕೋಳಿಯನ್ನು ಹೋಲುವ ರೆಕ್ಕೆ ಪುಕ್ಕಗಳನ್ನು ಹೊಂದಿದ್ದು, ಯಾವುದೇ ಭೌಗೋಳಿಕ ವಾತಾವರಣಕ್ಕೆ ಹೊಂದಿಕೊಂಡು ಹಿತ್ತಲಲ್ಲಿ ಬದುಕಬಲ್ಲವು. ಇವುಗಳಿಗೆ ಯಾವುದೇ ರೀತಿಯ ಆಧುನಿಕ ವಸತಿ, ಸಮತೋಲನ ಆಹಾರ, ಆರೋಗ್ಯ ರಕ್ಷಣಾ ಕ್ರಮಗಳ ಅವಶ್ಯಕತೆಯಿರುವುದಿಲ್ಲ.



## ದಕ್ಷಿಣ ಭಾರತದಲ್ಲಿ ಅಭಿವೃದ್ಧಿಪಡಿಸಿರುವ ಸುಧಾರಿತ ಕೋಳಿ ತಳಿಗಳು

| ತಳಿ ಬಿಡುಗಡೆ ಮಾಡಿದ ಸಂಸ್ಥೆ | ತಳಿ ಹೆಸರು | ಮುಖ್ಯ ಉದ್ದೇಶ |
|---|---|---|
| ಕುಕ್ಕುಟ ವಿಜ್ಞಾನ ವಿಭಾಗ, ಪಶು ವೈದ್ಯಕೀಯ ಕಾಲೇಜು, ಹೆಬ್ಬಾಳ, ಬೆಂಗಳೂರು-560024 | ಗಿರಿರಾಜ | ಮಾಂಸ & ತತ್ತಿ |
| | ಗಿರಿರಾಣಿ/ಸ್ವರ್ಣಧಾರ | ತತ್ತಿ |
| ಕೇರಳ ಕೃಷಿ ವಿಶ್ವವಿದ್ಯಾಲಯ, ಮುನ್ನತಿ, ತ್ರಿಶೂರ್, ಕೇರಳ | ಗ್ರಾಮಶ್ರೀ | ಮಾಂಸ & ತತ್ತಿ |
| | ಕೃಷ್ಣ ಪ್ರೀಯಾ | ಮಾಂಸ & ತತ್ತಿ |
| | ಗ್ರಾಮ ಲಕ್ಷ್ಮೀ | ತತ್ತಿ |
| ಕುಕ್ಕಟ ಯೋಜನಾ ನಿರ್ದೇಶನಾಲಯ, (Project Directorate on Poultry) ರಾಜೇಂದ್ರ ನಗರ, ಹೈದರಾಬಾದ್, ಆಂಧ್ರಪ್ರದೇಶ | ವನರಾಜ | ಮಾಂಸ & ತತ್ತಿ |
| | ಗ್ರಾಮ ಪ್ರೀಯಾ | ತತ್ತಿ |
| ಕುಕ್ಕಟ ವಿಜ್ಞಾನ ವಿಭಾಗ, ಪಶು ವೈದ್ಯಕೀಯ ಕಾಲೇಜು, ರಾಜೇಂದ್ರ ನಗರ, ಹೈದರಾಬಾದ್ | ರಾಜಶ್ರೀ | ತತ್ತಿ |
| ಕೇಂದ್ರೀಯ ಕುಕ್ಕಟ ಅಭಿವೃದ್ಧಿ ಸಂಸ್ಥೆ, ಹೇಸರಘಟ್ಟ, ಬೆಂಗಳೂರು, ಕರ್ನಾಟಕ | ಕಾವೇರಿ | ಮಾಂಸ & ತತ್ತಿ |
| ತಮಿಳುನಾಡು ಪಶುವೈದ್ಯಕೀಯ ಮತ್ತು ಪಶು ವಿಜ್ಞಾನಗಳ ವಿಶ್ವವಿದ್ಯಾಲಯ, ವೆಪೇರಿ, ಚೆನ್ನೈ, ತಮಿಳುನಾಡು | ನಂದನಂ | ಮಾಂಸ & ತತ್ತಿ |

## ಸಾಕುವ ಸರಳ ವಿಧಾನಗಳು:

1. ಒಂದು ದಿನದ ವಯಸ್ಸಿನ ಕೋಳಿ ಮರಿಗಳನ್ನು ಪಡೆದು ಸಾಕಣೆ ಮಾಡುವವರು ಮೂರು ವಾರದ ವಯಸ್ಸಿನವರೆಗೂ ಬಿದಿರಿನ ಬುಟ್ಟಿ ಒಳಗೆ ಬಲ್ಬ್ ಅನ್ನು ಜೋಡಿಸಿ ಕೃತಕ ಕಾವು ಕೊಡಬೇಕಾಗುತ್ತದೆ.
2. ಕಾಗೆ, ಹದ್ದು, ಬೆಕ್ಕು ಮತ್ತು ನಾಯಿಗಳಿಂದ ಕೋಳಿ ಮರಿಗಳನ್ನು ರಕ್ಷಿಸಲು, ಸುಮಾರು ಅರ್ಧ ಕೆ.ಜಿ.ಯಷ್ಟು ದೇಹದ ತೂಕ ಹೊಂದುವವರೆಗೂ ಮನೆಯಲ್ಲಿ ಪೋಷಿಸಿ ನಂತರ ಜವಾರಿ ಕೋಳಿಗಳಂತೆ ಹೊರಗಡೆ ಮೇಯಲು ಬಿಡಬಹುದು.

3. ಕೊಕ್ಕರೆ ರೋಗದಿಂದ ರಕ್ಷಿಸಲು 8ನೇ ದಿನ, 6ನೇ ವಾರ ಮತ್ತು 8ನೇ ವಾರದ ವಯಸ್ಸಿನಲ್ಲಿ ಕೊಕ್ಕರೆ ರೋಗದ ವಿರುದ್ಧಲಸಿಕೆ ಹಾಕಿಸಬೇಕು.

4. ಸುಧಾರಿತ ತಳಿಯ ಹೇಂಟೆಗಳು ಬೆಳೆದು 5 ರಿಂದ 6 ತಿಂಗಳ ವಯಸ್ಸಿನವಾದಾಗ ಮೊಟ್ಟೆ ಇಡಲು ಪ್ರಾರಂಭಿಸುತ್ತವೆ. ಪ್ರತಿ 6 ರಿಂದ 8 ಹೇಂಟೆಗಳಿಗೆ ಒಂದರಂತೆ "ಹುಂಜ"ಗಳು ಇರುವಂತೆ ನೋಡಿಕೊಳ್ಳಬೇಕು. ಸ್ಥಳೀಯ ಜವಾರಿ ಹುಂಜಗಳನ್ನು ಸ್ವರ್ಣಧಾರ ಹೇಂಟೆಗಳ ಜೊತೆಗಿರಿಸದೇ ಅವುಗಳನ್ನೆಲ್ಲಾ ಮಾಂಸಕ್ಕಾಗಿ ವಿಲೇವಾರಿ ಮಾಡಬೇಕು.

5. ಸುಧಾರಿತ ಹೇಂಟೆಗಳು ತಮಗೇ ಕಾವಿಗೆ ಕುಳಿತು ಮರಿ ಮಾಡಿಸುವ ಗುಣ ಹೊಂದಿರುವುದಿಲ್ಲ. ಆದುದರಿಂದ ಒಂದು ಜವಾರಿ ಕಾವು ಕೋಳಿಯಿಂದ ಸುಮಾರು 8–10 ತತ್ತಿಗಳನ್ನಿಟ್ಟು ಕಾವು ಕೊಟ್ಟು ಮರಿ ಮಾಡಿಸಬಹುದು.

6. ಸ್ಥಳೀಯವಾಗಿ ದೊರಕುವ ಜೋಳ, ಮೆಕ್ಕೆ ಜೋಳ, ಸಜ್ಜೆ, ನವಣೆ, ಗೋದಿ, ಅಕ್ಕಿ ನುಚ್ಚು ಹಾಗೂ ಇತರೆ ಆಹಾರ ಧಾನ್ಯಗಳನ್ನು ಪ್ರತಿ ಕೋಳಿಗೆ 30–50 ಗ್ರಾಂ.ನಂತೆ ಪ್ರತಿ ನಿತ್ಯ ಒದಗಿಸುವುದರಿಂದ ಅವುಗಳ ಮಾಂಸ ಮತ್ತು ತತ್ತಿ ಉತ್ಪಾದನೆ ಅಧಿಕಗೊಳಿಸಬಹುದು.

## ಸ್ವರ್ಣಧಾರ, ಗಿರಿರಾಜ ಮತ್ತು ಜವಾರಿ ಕೋಳಿಗಳ ತುಲನಾತ್ಮಕ ಹೋಲಿಕೆ

| ಗುಣಲಕ್ಷಣಗಳು | ಸ್ವರ್ಣಧಾರ | ಗಿರಿರಾಜ | ಜವಾರಿ |
|---|---|---|---|
| 8 ವಾರಗಳಲ್ಲಿ ಶರೀರದ ತೂಕ (ಗ್ರಾಂ.) | 1.1 | 1.6 | 0.70 |
| ವಾರ್ಷಿಕ ಮೊಟ್ಟೆ ಉತ್ಪಾದನೆ | 180–200 | 140–150 | 60–70 |
| ಸರಾಸರಿ ಮೊಟ್ಟೆ ತೂಕ (ಗ್ರಾಂ.) | 50–60 | 60 | 50 |

**ವಯಸ್ಕ ಮೈ ತೂಕ (ಕಿ.ಗ್ರಾಂ.)**

| | | | |
|---|---|---|---|
| ಹುಂಜ | 3.5–4.5 | 5.0–6.0 | 2.0–2.5 |
| ಹೇಂಟೆ | 2.5–3.0 | 2.5–4.0 | 1.5–1.8 |

ಸುಧಾರಿತ ತಳಿಗಳಲ್ಲಿ ತತ್ತಿ ಮತ್ತು ಮಾಂಸ ಉತ್ಪಾದನೆಯ ಸಾಮರ್ಥ್ಯವು ಜವಾರಿ ಕೋಳಿಗಳಿಗಿಂತ ಸುಮಾರು 2-3 ಪಟ್ಟು ಅಧಿಕವಾಗಿರುತ್ತದೆ. ಜವಾರಿ ಕೋಳಿಗಳಂತೆ ಮಾಂಸವು ರುಚಿಕರ ಹಾಗೂ ಸುಮಧುರವಾಗಿರುತ್ತದೆ. ಕೋಳಿ ಮಾಂಸ ಮತ್ತು ತತ್ತಿಗಳು ಒಳ್ಳೆಯ ಸಸಾರಜನಕಯುಕ್ತ ಪೌಷ್ಟಿಕ ಆಹಾರ. ಮೊಟ್ಟೆ ಉತ್ಪಾದನೆ ದೈನಂದಿನ ಕ್ರಿಯೆಯಾದುದರಿಂದ ರೈತ ಕುಟುಂಬದ ಪ್ರತಿ ದಿನದ ಅವಶ್ಯಕತೆಗಳನ್ನು ಪೂರೈಸುವಲ್ಲಿ ಗಿರಿರಾಜ / ಸ್ವರ್ಣಧಾರ ತಳಿಗಳು ಅನುಕೂಲವಾಗುತ್ತವೆ. ಗ್ರಾಮೀಣ ಮಕ್ಕಳ ಸಸಾರಜನಕದ ಅವಶ್ಯಕತೆಯನ್ನು ಪೂರೈಸುವುದರ ಜೊತೆಗೆ ದಿನದ ವೆಚ್ಚಕ್ಕೆ ಸ್ವಲ್ಪ ಹಣ ಒದಗಿಸುವಲ್ಲಿ ಈ ತಳಿಗಳು ಸಹಾಯಕಾರಿಯಾಗಿವೆ.

**20 ಸ್ವರ್ಣಧಾರ ಕೋಳಿ ಮರಿಗಳ ಸಾಕಣೆಯಿಂದ ಬರುವ ಆದಾಯದ ವಿವರಣೆ ಈ ಕೆಳಕಂಡಂತಿದೆ.**

- ಒಂದು ದಿನದ ಮರಿಗೆ ರೂ.15/-ರಂತೆ 20 ಮರಿಗಳಿಗೆ ರೂ.300/-ಗಳು.
- ಆಹಾರ: ಹಿತ್ತಲಲ್ಲಿ / ಹೊಲದಲ್ಲಿ ದೊರೆಯುವ ಜೋಳ, ರಾಗಿ, ಅಕ್ಕಿ ನುಚ್ಚು ಹಾಗೂ ಅಡುಗೆ ಮನೆಯ ತ್ಯಾಜ್ಯ ಪದಾರ್ಥಗಳು.
- ಮೊಟ್ಟೆಯಿಡಲು 25-26 ವಾರಗಳ ನಂತರ ಶೇ.80ರ ಉಳಿಕೆ ಪ್ರಮಾಣ = 16 ಕೋಳಿಗಳು.
- ಇದರಲ್ಲಿ ಅರ್ಧದಷ್ಟು ಅಂದರೆ 8 ಹೆಣ್ಣು, ಉಳಿದ ಅರ್ಧದಷ್ಟು ಅದರೆ 8 ಗಂಡು.
- 2 ಗಂಡು ಕೋಳಿಗಳನ್ನು ಬಿತ್ತನೆಗೆ ಉಳಿಸಿಕೊಂಡು ಉಳಿದ 6 ಕೋಳಿಗಳನ್ನು ಸರಾಸರಿ ರೂ.300/- ದರದಲ್ಲಿ ಮಾರಾಟ ಮಾಡಿದಲ್ಲಿ ಆದಾಯ ರೂ.1,800/-ಗಳು.
- 8 ಹೆಣ್ಣು ಕೋಳಿಗಳಿಂದ 75 ವಾರಗಳಲ್ಲಿ ಪ್ರತಿಯೊಂದು ಕೋಳಿಗೆ ರೂ.230/-ರಂತೆ ಒಟ್ಟು 1840 ತತ್ತಿಗಳು ದೊರೆಯುತ್ತವೆ. ಒಂದು ತತ್ತಿಗೆ ಕನಿಷ್ಠ ರೂ.3/-ರಂತೆ ಒಟ್ಟು ಆದಾಯ ರೂ.5,520/-ಗಳು
- ಕೊನೆಯಲ್ಲಿ 8 ಹೆಣ್ಣು ಕೋಳಿಗಳನ್ನು ರೂ.250/-ಗಳಂತೆ ಹಾಗೂ 2 ಗಂಡು ಕೋಳಿಗಳನ್ನು ರೂ.300/-ಗಳಂತೆ ವಿಲೇವಾರಿ ಮಾಡಿದಲ್ಲಿ ಒಟ್ಟು ಆದಾಯ ರೂ.2,600/-ಗಳು.

➢ 75 ವಾರಗಳಲ್ಲಿ 20 ಸ್ವರ್ಣಧಾರ ಮರಿಗಳಿಂದ ಬರುವ ಒಟ್ಟು ನಿವ್ವಳ ಲಾಭ (1899+5520+2600+300)=ರೂ.9,620/-ಗಳು. ಇದಲ್ಲದೇ, ಕೋಳಿಗಳ ಗೊಬ್ಬರದಿಂದ ಹೊಲದ ಫಲವತ್ತತೆ ಹೆಚ್ಚುತ್ತದೆ.

ಗಿರಿರಾಜ ಮತ್ತು ಸ್ವರ್ಣಧಾರ ಕೋಳಿ ಮರಿಗಳನ್ನು ಸಾಕಲಿಚ್ಛಿಸುವವರು ಕುಕ್ಕಟ ವಿಜ್ಞಾನ ವಿಭಾಗ, ಪಶು ವೈದ್ಯಕೀಯ ಕಾಲೇಜು, ಹೆಬ್ಬಾಳ, ಬೆಂಗಳೂರು-560 024 ಇವರಿಂದ ಮುಂಗಡವಾಗಿ ಕಾಯ್ದಿರಿಸಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಪಶು ವೈದ್ಯ ಸೇವಾ ಇಲಾಖೆ, ಜಿಲ್ಲಾ ಕೋಳಿ ಸಾಕಾಣಿಕಾ ಮತ್ತು ತರಬೇತಿ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ.

ಲೇಖಕರು : ಡಾ. ಎಸ್. ವೈ. ಮುಕರ್ತಾಳ
ಡಾ. ಎಸ್. ಎ. ಅಷ್ಟಪುತ್ರೆ
ಡಾ. ಟಿ. ಎಂ. ಸೌಮ್ಯ
ಶ್ರೀಮತಿ ಗೀತಾ ಎಸ್. ತಾಮಗಾಳೆ
ಡಾ. ಜಿ. ಆರ್. ರಾಜಕುಮಾರ

ಪ್ರಕಾಶಕರು : ಶ್ರೀ ಮಲ್ಲಿಕಾರ್ಜುನಪ್ಪಗೌಡ
ಅಕ್ಷರ ಜೋಡಣೆ : ಶ್ರೀಮತಿ ಸರೋಜ ತಳವಾರ
ವಿನ್ಯಾಸ : ಕು. ರೇಖಾ ಕೆ. ಎಸ್.

: ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :

ಕಾರ್ಯಕ್ರಮ ಸಂಯೋಜಕರು

**ಕೃಷಿ ವಿಜ್ಞಾನ ಕೇಂದ್ರ**

**ಹನುಮನಮಟ್ಟಿ-581 115**

ರಾಣೇಬೆನ್ನೂರು ತಾಲೂಕು, ಹಾವೇರಿ ಜಿಲ್ಲೆ

ದೂರವಾಣಿ : 08373-253524

ಮೊಬೈಲ್ : 94484 95338

ವಿದ್ಯುನ್ಮಾನ ಅಂಚೆ :

kvk_haveri@rediffmail.com

ಅಂತರಜಾಲ :

kvkhaveri.org